# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

***ಎಸ್‌ಸಿ. 321/2017***

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಪಿ.ಎಂ. ಸಿದ್ದರಾಜು | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಲೇಟ್ ಪುಟ್ಟಮಾದಯ್ಯ | | **12.08.2025** |
| **ವಯಸ್ಸು** | ಃ **64 ವರ್ಷ** | | |
| **ವೃತ್ತಿ** | ಃ ನಿವೃತ್ತ ಪೊಲೀಸ್ ನಿರೀಕ್ಷಕರು | **ಪ್ರಾ.ಸಾ.** ಃ 15 | |
| **ವಾಸಸ್ಥಳ** | ಃ ಕೊಳ್ಳೇಗಾಲ | **ಚಾ.ಸಾ.** ಃ **19** | |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ *2013* ರಿಂದ *2017* ರವರೆಗೆ ಪೊಲೀಸ್ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನು.

ದಿನಾಂಕ *08.06.2015* ರಂದು ಸಂಜೆ *8.00* ಗಂಟೆ ಸುಮಾರಿಗೆ ಪಿರ್ಯಾದಿ ಮಹದೇವಮೂರ್ತಿ ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದುಕೊಂಡು ಠಾಣಾ ಮೊ.ಸಂಖ್ಯೆ *56/2015* ಕಲಂ *341, 323, 392, 420, 504, 506* ಸಹ ಕಲಂ *34* ಐಪಿಸಿ ರೀತ್ಯ ಪ್ರಕರಣವನ್ನು ದಾಖಲೆ ಮಾಡಿಕೊಂಡು ಪ್ರ.ವ. ವರದಿಯನ್ನು ಮತ್ತು ದೂರನ್ನು ನ್ಯಾಯಾಲಯಕ್ಕೆ ಮತ್ತು ನಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೇನು. ಸಾಕ್ಷಿದಾರರು ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-*3* ಎಂದು ಗುರುತಿಸಲ್ಪಟಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ-*3(ಬಿ)* ಎಂದು ಗುರುತಿಸಲಾಯಿತು. ಪ್ರ.ವ.ವ ವರದಿಯನ್ನು

ನೋಡಿ ಗುರುತಿಸಿದ್ದು, ಅದನ್ನು ನಿಪಿ.*13* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು ನಿಪಿ. *13 (ಎ)* ಎಂದು ಗುರುತಿಸಲಾಯಿತು.

ದಿನಾಂಕ *09.06.2015* ರಂದು ಪಂಚಾಯಿತಿದಾರರಾದ ಮೊಹಮ್ಮದ್ ಅಜರ್ ಉದ್ದೀನ್ ಮತ್ತು ಮಹೇಶ್ವರ್ ಅವರಿಗೆ ಕೃತ್ಯ ನಡೆದ ಬಗ್ಗೆ ತಿಳಿಸಿ ಪಂಚರಾಗಲು ಕೇಳಿಕೊಂಡಿದ್ದು ಅವರಿಗೆ ನೊಟೀಸ್ ನೀಡಿ ಅವರ ಸಮಕ್ಷಮ ಪಂಚನಾಮೆ ಕ್ರಮವನ್ನು ಪಿರ್ಯಾದಿದಾರರು ತೋರಿಸಿದ ಕೃತ್ಯ ನಡೆದ ಸ್ಥಳದಲ್ಲಿ ಬೆಳಗ್ಗೆ *8.30* ರಿಂದ *9.30* ರವರೆಗೆ ಮಾಡಿದ್ದೆನು. ಸಾಕ್ಷಿದಾರರು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–*2* ಎಂದು ಗುರುತಿಸಲ್ಪಟ್ಟಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ–*2(ಸಿ)* ಎಂದು ಗುರುತಿಸಲಾಯಿತು.

ಆರೋಪಿತನ ಪತ್ತೆ ಬಗ್ಗೆ ಸಿಬ್ಬಂದಿಗಳನ್ನು ನೇಮಿಸಿದ್ದು ದಿನಾಂಕ *02.11.2015* ರಂದು ಸಿಬ್ಬಂದಿಗಳಾದ ರಾಜು, ಸುದೀಪ್ ಕುಮಾರ್ , ಸಿದ್ದಪ್ಪಾಜಿ ಮತ್ತು ಮೋಹನ್ ಕುಮಾರ್ ಅವರು ಆರೋಪಿ ಪತ್ತೆಗೆ ಹೋಗಿದ್ದು ದಿನಾಂಕ *04.11.2015* ರಂದು ಸಿಬ್ಬಂದಿಗಳು *1* ನೇ ಆರೋಪಿತನನ್ನು ವಶಕ್ಕೆ ಪಡೆದುಕೊಂಡು ಹಾಜರುಪಡಿಸಿದ್ದು ನಾನು *1* ನೇ ಆರೋಪಿಯನ್ನು ವಿಚಾರಣೆ ಮಾಡಿ ಆರೋಪಿತನ ಸ್ವ–ಇಚ್ಛಾ ಹೇಳಿಕೆಯನ್ನು ಪಡೆದುಕೊಂಡು ಆರೋಪಿಯ ಕಡೆಯಿಂದ ಕೃತ್ಯದ ಸಮಯದಲ್ಲಿ ಕಳವು ಮಾಡಿದ್ದ *15* ಗ್ರಾಂ ಚಿನ್ನದ ಸರವನ್ನು ಪಂಚರಾದ ಮಹೇಶ ಮತ್ತು ರಾಘವೇಂದ್ರ ಅವರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದೆನು. ಆರೇಪಿತನು ಸ್ವ–ಇಚ್ಛಾ ಹೇಳಿಕೆಯಲ್ಲಿ ಚಿನ್ನದ ಸರವನ್ನು ಕತ್ತಿನಲ್ಲಿ ಹಾಕಿಕೊಂಡಿದ್ದೇನೆ ಮತ್ತು ಗನ್ ಅನ್ನು ಊರಿನಲ್ಲಿ ಇಟ್ಟಿರುತ್ತೇನೆ ಜೊತೆಯಲ್ಲಿ ಬಂದರೆ ತೋರಿಸುತ್ತೇನೆ ಎಂದು ಹೇಳಿದ್ದನು. ಸಾಕ್ಷಿದಾರರು ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–

1 ಎಂದು ಗುರುತಿಸಲ್ಪಟ್ಟಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ಆರೋಪಿತನನ್ನು ಸಿಬ್ಬಂದಿಗಳ ಬೆಂಗಾವಲಿನಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೆನು. ಆರೋಪಿತನನ್ನು ಹಾಜರುಪಡಿಸಿ ಸಿಬ್ಬಂದಿಯವರು ವರದಿ ನೀಡಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲ್ಪಟ್ಟಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ದೂರನ್ನು ಕೊಡುವ ವೇಳೆಯಲ್ಲಿ ಕೈತಪ್ಪಿನಿಂದ ಕೃತ್ಯ ನಡೆದ ವೇಳೆಯಲ್ಲಿ ಆರೋಪಿತನು ಪಿಸ್ತೂಲು ತೋರಿಸಿ ಹೆದರಿಸಿದ ಬಗ್ಗೆ ದೂರಿನಲ್ಲಿ ಹೇಳಿರಲಿಲ್ಲವಾದ್ದರಿಂದ ಪಿರ್ಯಾದುದಾರರ ಮರುಹೇಳಿಕೆಯನ್ನು ಪಡೆದುಕೊಂಡಿದ್ದೆನು. ಸಾಕ್ಷಿದಾರರು ಆರೋಪಿತನ ಸ್ವ-ಇಚ್ಚಾ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.14 ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು ನಿಪಿ.14(ಎ) ಎಂದು ಮತ್ತು ಆರೋಪಿತನ ಸಹಿಯನ್ನು ನಿಪಿ.14(ಬಿ) ಎಂದು ಗುರುತಿಸಲಾಯಿತು.

ದಿನಾಂಕ 15.11.2015 ರಂದು ಆರೋಪಿತನನ್ನು ನ್ಯಾಯಾಲಯದಿಂದ ವಶಕ್ಕೆ ಪಡೆದುಕೊಂಡು ಆರೋಪಿತನನ್ನು ಕರೆದುಕೊಂಡು ಬೆಳಗಾಂ ಜಿಲ್ಲೆಯ ಸವದತ್ತಿ ಗ್ರಾಮಕ್ಕೆ ಹೋಗಿದ್ದು ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆದುಕೊಂಡಿದ್ದು ಆರೋಪಿತನ ಮನೆಯಲ್ಲಿ ಆರೋಪಿತ ಬಚ್ಚಿಟ್ಟಿದ್ದ ಗನ್ ಅನ್ನು ಆರೋಪಿತ ತೋರಿಸಿದ್ದು ಅದನ್ನು ಪಂಚರಾದ ಚಾಸಾ-11 ಮತ್ತು 12 ರವರ ಸಮಕ್ಷಮ ಅಮಾನತ್ತುಪಡಿಸಿಕೊಂಡಿದ್ದೆನು. ಅಮಾನತ್ತು ಪಂಚನಾಮೆಯನ್ನು ದಿನಾಂಕ 16.11.2015 ರಂದು ಮಧ್ಯಾಹ್ನ 12.50 ರಿಂದ 2.30 ಗಂಟೆಯವರೆಗೆ ಮಾಡಿದ್ದೆನು. ಸಾಕ್ಷಿದಾರರು ಅಮಾನತ್ತು ಪಂಚನಾಮೆಯನ್ನು ನೋಡಿ

ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*5* ಎಂದು ಗುರುತಿಸಲ್ಪಟ್ಟಿದ್ದು. ಸಾಕ್ಷಿದಾರರ ಸಹಿಯನ್ನು ನಿಪಿ. *5(ಬಿ)* ಎಂದು ಗುರುತಿಸಲಾಯಿತು. ನಾನು ಗನ್ ಅನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ನ್ಯಾಯಾಲಯದ ಮುಂದಿರುವ ಗನ್ ಅನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ಎಂ.ಒ.*1* ಎಂದು ಗುರುತಿಸಲ್ಪಟಿರುತ್ತದೆ. ಎಂ.ಒ–*1*ರಲ್ಲಿ ಗುಂಡುಗಳು ಇರಲಿಲ್ಲ. ಪುನಃ ಆರೋಪಿತನೊಂದಿಗೆ ವಾಪಸ್ಸು ಮೈಸೂರಿಗೆ ಬಂದು ಗನ್ ಮತ್ತು ಲೈಸನ್ಸ್ ಬಗ್ಗೆ ಮಾಲು ಪಟ್ಟಿ ಸಂಖ್ಯೆ ***66A/2015*** ರಂತೆ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೆನು. ಆರೋಪಿತನನ್ನು ಗನ್ ಅನ್ನು ಹೊಂದಲು ಲೈಸನ್ಸ್ ಏನಾದರೂ ಹೊಂದಿದ್ದೀಯಾ ಎಂದು ಕೇಳಿದ್ದಕ್ಕೆ ಆತನು ಲೈಸನ್ಸ್ ಹಾಜರುಪಡಿಸಿದ್ದನು. ಅದನ್ನು ನಿಪಿ–*5*ರ ಮಹಜರ್ ಅಡಿಯಲ್ಲಿ ಅಮಾನತ್ತು ಪಡಿಸಿಕೊಂಡಿದ್ದೆನು. ಸಾಕ್ಷಿದಾರರು ಲೈಸನ್ಸ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–*12* ಎಂದು ಗುರುತಿಸಲ್ಪಟ್ಟಿರುತ್ತದೆ.

ಆರೋಪಿತನು ತನಿಖೆಗೆ ಅವಶ್ಯಕತೆ ಇದ್ದುದರಿಂದ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೆನು. ನಂತರ ಸಾಕ್ಷಿದಾರರಾದ ನಾರಾಯಣ, ಎಲ್ವಿನ್, ಶ್ರೀಕಾಂತ್, ರವಿ, ಮಹೇಶ್ವರ್, ರಾಘವೇಂದ್ರ, ಎಕ್ಕನಗೌಡ, ಪರಪ್ಪನಗೌಡ ಮತ್ತು ಸಿಬ್ಬಂದಿಯವರ ಹೇಳಿಕೆಗಳನ್ನು ಪಡೆದುಕೊಂಡಿದ್ದೆನು. ಸಾಕ್ಷಿದಾರರಾದ ರಾಘವೇಂದ್ರ ಅವರು ನಿಪಿ –*8* ರಂತೆ ನನ್ನ ಮುಂದೆ ಹೇಳಿಕೆಯನ್ನು ಕೊಟ್ಟಿದ್ದರು. ಸಾಕ್ಷಿದಾರರಾದ ಪಾಂಡುರಂಗ ಶೆಟ್ಟಿ ನಿಪಿ–*11* ರಂತೆ ನನ್ನ ಮುಂದೆ ಹೇಳಿಕೆಯನ್ನು ಕೊಟ್ಟಿದ್ದರು. ನಂಜುಂಡಸ್ವಾಮಿ ರವರ ಹೇಳಿಕೆಯನ್ನು ಸಹ ಪಡೆದುಕೊಂಡಿದ್ದೆನು. ಸವದತ್ತಿ ಮತ್ತು ಬೆಳಗಾಂ ಜಿಲ್ಲಾಧಿಕಾರಿಯವರಿಂದ ಆರೋಪಿತನಿಗೆ ಸಂಬಂಧಪಟ್ಟ ಮತ್ತು ಕೃತ್ಯಕ್ಕೆ ಬಳಸಿದ್ದ ಗನ್ ನ ಬಗ್ಗೆ ಲಿಖಿತ ಮಾಹಿತಿ ಪಡೆದುಕೊಂಡಿದ್ದೆನು. ಆರೋಪಿತನು ಜಿ.ರವಿ ಎಂಬುವ ಸಾಕ್ಷಿದಾರರ ಬ್ಯಾಂಕ್ ಖಾತೆಗೆ

*3,50,000/-* ರೂಪಾಯಿ ಹಾಕಿದ್ದು ಆ ಬಗ್ಗೆ ಬ್ಯಾಂಕ್ ಸ್ಟೇಟ್ ಮೆಂಟ್ ಅನ್ನು ಪಡೆದುಕೊಂಡಿದ್ದೆನು. ಸಾಕ್ಷಿದಾರರು ಬ್ಯಾಂಕ್ ಸ್ಟೇಟ್ ಮೆಂಟ್ ಅನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.*4* ಎಂದು ಗುರುತಿಸಲ್ಪಟ್ಟಿದ್ದು. ಸಾಕ್ಷಿದಾರರ ಸಹಿಯನ್ನು ನಿಪಿ.*4*(ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ***Axis bank*** ನ ಸ್ಟೇಟ್ ಮೆಂಟ್ ಮತ್ತು ಕವರಿಂಗ್ ಲೆಟರ್ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-*15* ಮತ್ತು *16* ಎಂದು ಸಾಕ್ಷಿದಾರರ ಸಹಿಗಳನ್ನು ನಿಪಿ-*15*(ಎ) , ನಿಪಿ-*15*(ಬಿ) ಮತ್ತು ನಿಪಿ-*16*(ಎ) ಎಂದು ಗುರುತಿಸಲಾಯಿತು. ಪಿರ್ಯಾದುದಾರರು ರೈಲ್ವೆ ಪರೀಕ್ಷೆಗೆ ಕುಳಿತ ಬಗ್ಗೆ ಹಾಲ್ ಟಿಕೇಟ್ ನಕಲನ್ನು ಪಡೆದುಕೊಂಡಿದ್ದೆನು. ಸಾಕ್ಷಿದಾರರು ಹಾಲ್ ಟಿಕೇಟ್ ನಕಲನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.*17* ಎಂದು ಗುರುತಿಸಲಾಯಿತು. ಸಾಕ್ಷಿದಾರರ ಸಹಿಯನ್ನು ನಿಪಿ. *17*(ಎ) ಎಂದು ಗುರುತಿಸಲಾಯಿತು. ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-*6* ಎಂದು ಗುರುತಿಸಲ್ಪಟ್ಟಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ-*6*(ಬಿ) ಎಂದು ಗುರುತಿಸಲಾಯಿತು. ಸವದತ್ತಿ ಪೊಲೀಸ್ ಠಾಣೆಯವರು ಆರೋಪಿತನು ಪ್ರಕರಣದಲ್ಲಿ ಇದ್ದ ಬಗ್ಗೆ ಲಿಖಿತ ಮಾಹಿತಿಯನ್ನು ಕೊಟ್ಟಿದ್ದರು. ಸಾಕ್ಷಿದಾರರು ಕವರಿಂಗ್ ಲೆಟರ್ ಮತ್ತು ಐಟಿ ವರದಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-*18* ಮತ್ತು ನಿಪಿ-*19* ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-*18*(ಎ) ಮತ್ತು ನಿಪಿ-*19*(ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ಜಿಲ್ಲಾಧಿಕಾರಿ ಬೆಳಗಾಂ ರವರ ಕವರಿಂಗ್ ಲೆಟರ್ ನೋಡಿ ಗುರುತಿಸಿದ್ದು ಅದನ್ನು ನಿಪಿ-*20* ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-*20*(ಎ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ಚಿನ್ನದ ಸರದ ಟೆಸ್ಟಿಂಗ್ ರಿಪೋರ್ಟ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-*21* ಎಂದು ಸಾಕ್ಷಿದಾರರ

ಸಹಿಯನ್ನು ನಿಪಿ-*21(ಎ)* ಎಂದು ಗುರುತಿಸಲಾಯಿತು. ಸಾಕ್ಷಿದಾರರು ಸುಬ್ರಮಣ್ಯ ಜ್ಯುವೆಲರಿ ವರ್ಕ್ಸ್ ರವರು ನೀಡಿರುವ ದಾಖಲೆ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-*10* ಎಂದು ಗುರುತಿಸಲ್ಪಟ್ಟಿದ್ದು ಸಾಕ್ಷಿದಾರರ ಸಹಿಯನ್ನು ನಿಪಿ-*10(ಎ)* ಎಂದು ಗುರುತಿಸಲಾಯಿತು. ನಾನು ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿತನು ನ್ಯಾಯಾಲಯಕ್ಕೆ ಗೈರು ಹಾಜರಿದ್ದು ಆರೋಪಿ ಪರ ವಕೀಲರು ಆರೋಪಿತನ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ತನಿಖೆ ಪೂರ್ಣಗೊಂಡಿದ್ದರಿಂದ ದಿನಾಂಕ *25.02.2017* ರಂದು ನ್ಯಾಯಾಲಯಕ್ಕೆ ದೋಷರೋಪಣಾ ಪತ್ರವನ್ನು ಸಲ್ಲಿಸಿದ್ದೆನು.

**( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆ ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶವನ್ನು ನೀಡಿ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಞ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು